ಈ) ಹಿಂದಿನ ವಿಧಾನಸಭೆಯಲ್ಲಿ ಈ ಕೆಲಸವನ್ನು ಪೂರ್ಣ ಮುಗಿಸಲಾಗುವುದೆಂದು ಆಶ್ವಾಸನೆ ನೀಡಿ ಈ ಕೆಲಸಕ್ಕೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ತಿಳಿಸಿದ ದಿಶೆಯಲ್ಲಿ ಸರ್ಕಾರದವರು ಯಾವ ಕ್ರಮ ಕೈಗೊಂಡಿರುವರು?

ಡಾ: ಡಿ. ಪ್ರೇಮಚಂದ್ರ ಸಾಗರ್
(ಯುವಜನಸೇವೆ ಕ್ರೀಡಾ ಹಾಗೂ ದೈಹಿಕ ಶಿಕ್ಷಣ ಸಚಿವರು)

ಇಲ್ಲ.
ಅನ್ವಯಿಸುವುದಿಲ್ಲ.
ಅನ್ವಯಿಸುವುದಿಲ್ಲ.
ಈ ಬಗ್ಗೆ ಯಾವ ಆಶ್ವಾಸನೆಯನ್ನು ನೀಡಿರುವುದಿಲ್ಲ.

ವಿಷಯ:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚಲಾದ ನಿವೇಶನಗಳ ಸಂಖ್ಯೆ:

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೭:- (೪೨೦)
ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)
ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ವಿತರಣೆಯಾಗಿರುವ ನಿವೇಶನಗಳ ಸಂಖ್ಯೆ ಎಷ್ಟು?
ಆ) ಅವುಗಳನ್ನು ಯಾವ ಆಧಾರದ ಮೇಲೆ ಹಂಚಲಾಗುವುದು?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ೧೯೯೦ ರಿಂದೀಚೆಗೆ ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ ಆದಾಗ್ಯೂ ವಿವಿಧ ಅಳತೆಯ ನಿವೇಶನಗಳನ್ನು ೧೯೮೭-೮೮ರ ಪ್ರಕರಣ ಅನುಸಾರ ಹಂಚಿಕೆ ಮಾಡಿದ ನಿವೇಶನ ಹಂಚಿಕೆದಾರರಿಗೆ ನಿವೇಶನ ಸಂಖ್ಯೆ ಮತ್ತು ಬಡಾವಣೆಯನ್ನು ಸೂಚಿಸಲಾಗಿರುತ್ತದೆ.

ತಿಂಗಳು	ವರ್ಷ	ನಿವೇಶನ ಸಂಖ್ಯೆ ನಮೂದಿಸಿರುವುದು
ಫೆಬ್ರವರಿ	೧೯೯೦	೧೦೬೪ ನಿವೇಶನಗಳು
ಜೂನ್	೧೯೯೦	೮೮೭ ನಿವೇಶನಗಳು
ಜುಲೈ	೧೯೯೨	೧೧೧೩ ನಿವೇಶನಗಳು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮಾವಳಿ ೧೯೮೪ರ ಪ್ರಕಾರ ಹಂಚಲಾಗುವುದು.

ವಿಷಯ:- ರಾಜ್ಯದ ಆಡಳಿತ ಸುಧಾರಣೆಗೆ ಪಂಚಸೂತ್ರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೨೮:- (೪೧೯)
ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)
ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೮) ಆಡಳಿತ ಸುಧಾರಣೆಗೆ ಸಂಬಂಧಪಟ್ಟಂತೆ ಸರ್ಕಾರ ಉದ್ದೇಶಿಸಿದ ಪಂಚಸೂತ್ರ ಕಾರ್ಯಕ್ರಮಗಳನ್ನು ಕಾರ್ಯಗತ ಮಾಡಲಾಗಿದೆಯೇ?
ಆ) ಹಾಗಿದ್ದರೆ ಅದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?